# ಗುಬ್ಬಿ ಮತ್ತು ಮರಿಗುಬ್ಬಿ

■ ರೇಶ್ಮಾ ಗುಳೇದಗುಡ್ಡಾಕರ್
ಕಲೆ: ಸಂತೋಷ್ ಸಸಿಹಿತ್ಲು



ಒಂದು ಆಲದ ಮರದಲ್ಲಿ ಮರಿಗುಬ್ಬಿ ತನ್ನ ತಾಯಿಯೊಂದಿಗೆ ವಾಸವಾಗಿತ್ತು. ತಾಯಿ ಗುಬ್ಬಿ ಹಾಕಿದ ನಾಲ್ಕು ಮೊಟ್ಟೆಗಳಲ್ಲಿ ಮೂರೂ ಮೊಟ್ಟೆಗಳು ಕಾಗೆ, ಗಿಡುಗಗಳ ಪಾಲಾಗಿ ಒಂದು ಮೊಟ್ಟೆ ಉಳಿಸಿಕೊಳ್ಳುವಲ್ಲಿ ತಾಯಿ ಗುಬ್ಬಿಗೆ ಸಾಕು ಸಾಕಾಗಿತ್ತು. ಮೊಟ್ಟೆಯೊಡೆದು ಮರಿ ಹೊರಗೆ ಬಂದಾಗ ತಾಯಿಗುಬ್ಬಿಯ ಸಂಭ್ರಮ ಮುಗಿಲು ಮುಟ್ಟಿತ್ತು. ಅದನ್ನು ಬಹುಪ್ರೀತಿಯಿಂದ, ಕಾಳಜಿಯಿಂದ ಸಾಕುತಿತ್ತು. ಪುಟ್ಟ ಮರಿಯು ಅಮ್ಮನ ಆರೈಕೆಯಲ್ಲಿ ಮುದ್ದಾಗಿ ಬೆಳೆಯುತ್ತಿತ್ತು. ತಾಯಿ ಗುಬ್ಬಿ ಆಹಾರ ಹುಡುಕಲು ಹೊರಗೆ ಹೋಗುವಾಗ ಗೂಡಿಗೆ ಹೆಚ್ಚು ರಕ್ಷಣೆ ಮಾಡಿ ಮರಿಗುಬ್ಬಿಗೂ ಗೂಡು ಬಿಟ್ಟು ಹೊರಗೆ ಹೋಗದಂತೆ ಹಲವು ಸೂಕ್ಷ್ಮ ವಿಚಾರಗಳನ್ನು ತಿಳಿಸಿ ಹೇಳಿ ಹೋಗುತ್ತಿತ್ತು. ಒಮ್ಮೊಮ್ಮೆ ಆಹಾರ ಸಿಗುವುದು ತಡವಾದಾಗ ಮರಿಯ ನೆನಪಾಗಿ ತಕ್ಷಣವೇ ಹಿಂದಿರುಗಿ ಮರಿ ಗುಬ್ಬಿಯನ್ನು ನೋಡಿ ಮುದ್ದು ಮಾಡಿ ಹೋಗುತ್ತಿತ್ತು. ಆಹಾರ ಸಿಕ್ಕ ತಕ್ಷಣ ಶರವೇಗದಿ ಬಂದು ತನ್ನ ಮುದ್ದು ಮರಿಗೆ ಗುಟುಕು ನೀಡಿ ಹೋಗುತ್ತಿತ್ತು. ಹೀಗೆ ದಿನಚರಿ ಸಾಗಿತ್ತು. ದಿನಕಳೆದಂತೆ ಮರಿ ಗುಬ್ಬಿ ಬೆಳೆಯುತ್ತಾ ಬಂದಿತು. ಆದರೆ, ಅದಕ್ಕೆ ಇನ್ನೂ ರೆಕ್ಕೆ ಬಲಿತಿರಲಿಲ್ಲ. ಆದರೂ ಅದು ತನ್ನ ದೇಹದ ಬಗ್ಗೆ ತಿಳಿಯದೆ ಹೆಚ್ಚು ತುಂಟಾಟ ಮಾಡುತಿತ್ತು.

ಅದಕ್ಕೋ ಅತಿಯಾದ ಕುತೂಹಲ ಮತ್ತು ಧೈರ್ಯ ತುಂಬಿ ತುಳುಕುತ್ತಿತ್ತು. ತಾಯಿ ಗುಬ್ಬಿ ಎಷ್ಟು ಹೇಳಿದರೂ ಮರಿ ಗುಬ್ಬಿ ಮೆಲ್ಲಗೆ ಗೂಡನ್ನು ದಾಟಿ ಹೊರಗೆ ಬಂದು ಇಣುಕಿ ನೋಡಿ ಜಗತ್ತಿನ ಸೌಂದರ್ಯವನ್ನು ಕಂಡು ಸಂತೋಷಪಟ್ಟು ಕುಣಿದು ಕುಪ್ಪಳಿಸುತ್ತಿತ್ತು. ತಾನೇ ಹಾರಲು ಪ್ರಯತ್ನ ಮಾಡುತಿತ್ತು. ಅದನ್ನು ಕಂಡ ತಾಯಿ ಗುಬ್ಬಿ ಹಲವು ಬಾರಿ ಬುದ್ಧಿ ಹೇಳಿದರೂ ಅದು ತಾಯಿಯ ಮುಂದೆ ಸಭ್ಯನಂತೆ ನಟನೆ ಮಾಡಿ ತಾಯಿಗೆ ಮರಳು ಮಾಡುತಿತ್ತು. ಆದರೆ ತನ್ನ ತುಂಟಾಟ ಮಾತ್ರ ಬಿಡುತ್ತಿರಲಿಲ್ಲ ಜಾಣ ಗುಬ್ಬಿ. ಮರಿಗುಬ್ಬಿಯ ಕುತೂಹಲ, ಆತುರ ಬುದ್ಧಿಯಿಂದ ಹಲವು ಬಾರಿ ತೊಂದರೆಗಳು ಆಗುತ್ತಿದ್ದವು. ದಿನಗಳು ಕಳೆದಂತೆ ಬೇಸಿಗೆ ಕಾಲ ಆರಂಭವಾದಾಗ ತಾಯಿ ಗುಬ್ಬಿ ಮರಿಯನ್ನು ಕರೆದು 'ನೋಡು ಇನ್ನು ಸುಡು ಬಿಸಿಲು ಆರಂಭವಾಗಿದೆ. ಇದಕ್ಕೆ ಬೇಸಿಗೆ ಕಾಲ ಎಂದು ಹೆಸರು. ಈ ಸಮಯದಲ್ಲಿ

---



# ಚಳಿ ಚಳಿ

■ ರವಿರಾಜ ಹಾಲಂಬಿ
ಕಲೆ: ಸಂತೋಷ್ ಸಸಿಹಿತ್ಲು

ಇದೋ ಬಂತು ಚಳಿಗಾಲ
ಗಡ ಗಡ ಗಡ
ಮೂಲೆಲಿಟ್ಟ ಸ್ವೆಟರ್ರು ಹೊದ್ರೂ
ಗಡ ಗಡ ಗಡ

ತಲೆಗೆ ಟೋಪಿ ಕತ್ತಿಗೆ ಮಫ್ಲರ್ರು
ಗಡ ಗಡ ಗಡ
ಕೈಗೂ ಕಾಲ್ಗೂ ಗ್ಲೌಸು ಸಾಕ್ಸು
ಗಡ ಗಡ ಗಡ

ಸಂಜೆ ಬೆಳಗ್ಗೆ ಹೊರ ಹೊರಟ್ರೆ
ಗಡ ಗಡ ಗಡ
ಬಿಸಿ ಚಾ ಕಾಫಿ ಕುಡಿದ್ರು
ಗಡ ಗಡ ಗಡ

ಕಿಟಕಿ ಬಾಗಿಲು ಹಾಕಿಕೊಂಡ್ರೂ
ಗಡ ಗಡ ಗಡ
ಅಗ್ಗಷ್ಟಿಕೆ ಎದುರು ಕೂತ್ರೂ
ಗಡ ಗಡ ಗಡ

ನವೆಂಬರಿಂದ ಶುರುವಾಗುತ್ತೆ
ಗಡ ಗಡ ಗಡ
ಫೆಬ್ರುವರಿ ಕೊನೆ ಓಡುವುದು
ದಡ ಬಡ ಬಡ ■